

## 3

ಯಾಕೊ ಸಂಜೆ ಉದಾಸವಾಗಿದೆ;
ಯಾವುದೊ ನೆನಪು,
ತೇವ ನೇತ್ರಗಳು ಹುಡುಕುತಿವೆ
ನೂರು ಕಾರಣಗಳ
ಓ, ದೇವರೆ, ನನ್ನ ಬಳಿ ಇರದ,
ಅವನ ಮರೆಯುವಂಥ
ಗಳಿಗೆಯ ಕರುಣಿಸು,
ಇಲ್ಲವೆ, ಆ ಸುಂದರ ಸಂಜೆಗಳ
ಮತ್ತೆ ಮರಳಿ ಕೊಟ್ಟು ಬಿಡು

## 4

ನಿನ್ನ ಮೊದಲ ಬಾರಿ ನೋಡಿದಾಗಲೆ
ನನಗೆನಿಸಿತು
ನೀನು ನನಗೆ ಅಪರಿಚಿತನೇನಲ್ಲ
ನಾನು ಈ ಮುನ್ನ ನಿನ್ನ
ಮೋಹಿಸಿದ್ದೇನೆ
ಆ ಕೆನ್ನೆ ಬಿಸುಪು, ಮುಂಗುರುಳ ಲಾಸ್ಯ
ಸ್ವಚ್ಛ ನಗೆಯನ್ನು ಮೋಹಿಸಿದ್ದೇನೆ
ನಾವು ಹೊಸಬರಲ್ಲ, ಈ ಮುನ್ನ
ಕೂಡಿ ಕಳೆದಿದ್ದೇವೆ
ಎಲ್ಲಿ, ಎಲ್ಲಿ,
ಓಹ್! ಇನ್ನಾವುದೊ ಸಮಯದಲ್ಲಿ
ಅಗಣಿತ ಜನ್ಮಗಳಲ್ಲಿ!